## ತಿದ್ದುಪಡಿ ಪ್ರಕಟಣೆ

## ಶಾಸ್ತ್ರೀಯ ಕನ್ನಡದ ಅಧ್ಯಯನ ಹಾಗೂ ಸಂಶೋಧನೆ ಕುರಿತ ಐದು ದಿನಗಳ ಕಾರ್ಯಗಾರದಲ್ಲಿ ಭಾಗವಹಿಸುವ ಕುರಿತು

ಭಾರತೀಯ ಭಾಷಾ ಸಂಸ್ಥಾನ, ಮಾನಸಗಂಗೋತ್ರಿ, ಮೈಸೂರು ಇಲ್ಲಿ ದಿನಾಂಕ 10.08.2017ರಿಂದ 14.08.2017ರವರೆಗೆ ಶಾಸ್ತ್ರೀಯ ಕನ್ನಡದ ಅಧ್ಯಯನ ಹಾಗೂ ಸಂಶೋಧನೆ ಕುರಿತು ನಡೆಸಲು ನಿಗದಿಪಡಿಸಲಾಗಿದ್ದ ಐದು ದಿನಗಳ ಕಾರ್ಯಗಾರವನ್ನು ಅನಿವಾರ್ಯ ಕಾರಣದಿಂದ ದಿನಾಂಕ **17.08.2017 ರಿಂದ 21.08.2017ಕ್ಕೆ** ಮುಂದೂಡಲಾಗಿದ್ದು, ಕಾರ್ಯಗಾರಕ್ಕೆ ಅರ್ಹ ಹಾಗೂ ಆಸಕ್ತಿಯುಳ್ಳ ಅಭ್ಯರ್ಥಿಗಳಿಂದ ಅರ್ಜಿಯನ್ನು ಆಹ್ವಾನಿಸಲಾಗಿದೆ.

**ಅರ್ಜಿ ಸಲ್ಲಿಸಲು ಕೊನೆಯ ದಿನಾಂಕವನ್ನು 07.08.2017ರವರೆ ವಿಸ್ತರಿಸಲಾಗಿದೆ.**

**ಉಳಿದಂತೆ ಅರ್ಜಿ ನಮೂನೆ ಹಾಗೂ ನಿಬಂಧನೆಗಳು ಯಥಾವತ್ತಾಗಿರುತ್ತವೆ**.

ಶಾಸ್ತ್ರೀಯ ಕನ್ನಡದ ಅಧ್ಯಯನ ಹಾಗೂ ಸಂಶೋಧನೆ ಕುರಿತ ಐದು ದಿನಗಳ ಕಾರ್ಯಗಾರದಲ್ಲಿ ಭಾಗವಹಿಸಲು ಅರ್ಹ ಹಾಗೂ ಆಸಕ್ತಿಯುಳ್ಳ ಅಭ್ಯರ್ಥಿಗಳಿಗಾಗಿ ನಿಗದಿತ ನಮೂನೆಯಲ್ಲಿ ಅರ್ಜಿಯನ್ನು ಆಹ್ವಾನಿಸಿದೆ.

**ಕಾರ್ಯಗಾರದ ವಿಷಯ:** ಶಾಸ್ತ್ರೀಯ ಕನ್ನಡದ ಅಧ್ಯಯನ ಹಾಗೂ ಸಂಶೋಧನೆ ಕುರಿತು

**ಕಾರ್ಯಗಾರದ ದಿನಾಂಕ:** 17.08.2017ರಿಂದ 21.08.2017ರವರೆಗೆ

**ಅರ್ಹತೆ:** ಕಾಲೇಜು ಉಪನ್ಯಾಸಕರು ಹಾಗೂ ಕನ್ನಡ ಸಂಶೋಧನಾ ವಿದ್ಯಾರ್ಥಿಗಳು ಕಾರ್ಯಗಾರದಲ್ಲಿ ಭಾಗವಹಿಸಬಹುದು.

**ಪ್ರಾಮುಖ್ಯತೆ:** ಈ ಕೆಳಕಂಡ ವಿಷಯಗಳ ಬಗ್ಗೆ ತಿಳಿದವರಿಗೆ ಆದ್ಯತೆಯನ್ನು ನೀಡಲಾಗುವುದು:

1. ಹಳೆಗನ್ನಡ ಹಾಗೂ ನಡುಗನ್ನಡದ ಬಗ್ಗೆ ಸಂಶೋಧನೆ ಮಾಡುತ್ತಿರುವ ವಿದ್ಯಾರ್ಥಿಗಳು
2. ಹಳೆಗನ್ನಡ ಹಾಗೂ ನಡುಗನ್ನಡದ ಬಗ್ಗೆ ಪುಸ್ತಕವನ್ನು ಪ್ರಕಟಿಸಿರುವವರು.

ಕಾರ್ಯಗಾರದಲ್ಲಿ ಒಟ್ಟು 35-40 ಶಿಬಿರಾರ್ಥಿಗಳಿಗೆ ಅವಕಾಶವಿದೆ.

**ಕಾರ್ಯಗಾರದಲ್ಲಿ ಭಾಗವಹಿಸುವ ಶಿಬಿರಾರ್ಥಿಗಳಿಗೆ ನೀಡುವ ಸೌಕರ್ಯಗಳು:**

1. ಪ್ರಯಾಣದ ಸ್ಲೀಪರ್ / ಹವಾ ನಿಯಂತ್ರಿತ ಮೂರನೆ ದರ್ಜೆ ರೈಲಿನಲ್ಲಿ ಪ್ರಯಾಣ ಮಾಡಿ ಟಿಕೇಟು ನೀಡಿದಲ್ಲಿ ಪ್ರಯಾಣ ಭತ್ಯೆಯನ್ನು ನೀಡಲಾಗುವುದು.
2. ಭಾರತೀಯ ಭಾಷಾ ಸಂಸ್ಥಾನದ ವಸತಿ ನಿಲಯದಲ್ಲಿ ಇಳಿದುಕೊಳ್ಳಲು ವ್ಯವಸ್ಥೆ ಕಲ್ಪಿಸಲಾಗುವುದು.
3. ಕಾರ್ಯಗಾರದಲ್ಲಿ ಭಾಗವಹಿಸುವ ಶಿಬಿರಾರ್ಥಿಗಳಿಗೆ ಮಧ್ಯಾಹ್ನದ ಊಟ ಹಾಗೂ ಚಹಾದ ವ್ಯವಸ್ಥೆಯನ್ನು ಮಾಡಲಾಗಿದೆ.
4. ಕಾರ್ಯಗಾರದಲ್ಲಿ ಭಾಗವಹಿಸುವ ಶಿಬಿರಾರ್ಥಿಗಳು ಬೆಳಗಿನ ಉಪಹಾರ ಹಾಗೂ ರಾತ್ರಿಯ ಊಟಕ್ಕಾಗಿ ದಿನಭತ್ಯೆವಾಗಿ ರೂ.150/- ನೀಡಲಾಗುವುದು (ಉಪಹಾರ/ರಾತ್ರಿಯ ಊಟದ ವ್ಯವಸ್ಥೆಯನ್ನು ಶಿಬಿರಾರ್ಥಿಗಳೆ ನೋಡಿಕೊಳ್ಳುವುದು).

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ : 7ನೇ ಆಗಸ್ಟ್ 2017.

ನಿಗದಿಪಡಿಸಿರುವ ದಿನಾಂಕದ ನಂತರ ಬಂದ ಅರ್ಜಿಗಳನ್ನು ಪರಿಗಣಿಸುವುದಿಲ್ಲ.

ಪೂರ್ಣವಾಗಿ ಭರ್ತಿ ಮಾಡಿದ ಅರ್ಜಿಗಳನ್ನು ಪ್ರಭಾರ ಯೋಜನಾಧಿಕಾರಿಗಳು, ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರ, ಭಾರತೀಯ ಭಾಷಾ ಸಂಸ್ಥಾನ, ಮಾನಸಗಂಗೋತ್ರಿ, ಮೈಸೂರು - 570 006 ಇವರಿಗೆ ಕಳುಹಿಸುವುದು. ಕಾರ್ಯಗಾರಕ್ಕೆ ಆಯ್ಕೆಯಾಗಿರುವ ಬಗ್ಗೆ ಜರೂರಾಗಿ ತಮಗೆ ತಿಳಿಸಲು, ಪೂರ್ಣವಾಗಿ ಭರ್ತಿ ಮಾಡಿ ಹಾಗೂ ಸಹಿ ಮಾಡಿದ ಅರ್ಜಿಗಳನ್ನು ಸ್ಕ್ಯಾನ್ ಮಾಡಿ ಈ ಕೆಳಗಿನ ಇ-ಮೇಲ್ ವಿಳಾಸಕ್ಕೂ ಕಳುಹಿಸಬಹುದಾಗಿದೆ.

E-mail: cesckmysore@gmail.com.

ಸಂಪರ್ಕಿಸ ಬೇಕಾದ ದೂರವಾಣಿ ಸಂಖ್ಯೆಗಳು: 0821-2415306/2345306.

**ಪ್ರಭಾರ ಯೋಜನಾಧಿಕಾರಿ, ಶಾ.ಕ.ಅ.ಅ. ಕೇಂದ್ರ, ಮೈಸೂರು**